**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 18.02.2026:**

**ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ**

ವಾದಿ ನನ್ನ ಹೆಂಡತಿ. ಗಂಡಸಿ ಹ್ಯಾಂಡ್ ಪೋಸ್ಟ್ ನಲ್ಲಿ ಕೊಬ್ಬರಿ ವ್ಯಾಪಾರ ನಡೆಸುತ್ತಾರೆ. 2022 ರಿಂದ ಮಧ್ಯಸ್ಥಿಕೆ ಕೇಂದ್ರಕ್ಕೆ ಅರ್ಜಿ ಸಲ್ಲಿಸುವವರೆಗೆ ನಾವು 26,19,42,975ರೂಪಾಯಿ ಬೆಲೆಯ ಕೊಬ್ಬರಿಯನ್ನು ಸರಬರಾಜು ಮಾಡಿದ್ದೇವೆ ಎಂದರೆ ಸರಿ.ಅದರಲ್ಲಿ ಪ್ರತಿವಾದಿಯು 37,92,600ರೂಪಾಯಿ ಬೆಲೆಯ ಕೊಬ್ಬರಿಯನ್ನು ವಾಪಸ್ ಕಳುಹಿಸಿದ್ದಾರೆ ಎಂದರೆ ಸರಿಯಲ್ಲ. ಆ ಕೊಬ್ಬರಿಯನ್ನು ಸಾಗಿಸಿದ ಚೀಲಕ್ಕೆ ಸಂಬಂಧಪಟ್ಟಂತೆ 4,36,246ರೂಪಾಯಿಗಳನ್ನು ನಮಗೆ ಬರಬೇಕಾಗಿದ್ದ ಹಣದಲ್ಲಿ ಪ್ರತಿವಾದಿ ಕಡಿತಗೊಳಿಸಿದ್ದಾರೆ ಎಂದರೆ ಸರಿ. ಉಳಿಕೆ ಹಣದಲ್ಲಿ 2,49,473ರೂಪಾಯಿ ಟಿಡಿಎಸ್ ಹಣವನ್ನು ಕಡಿತಗೊಳಿಸಿ ಪ್ರತಿವಾದಿಯರು ನಮಗೆ ಹಣ ಪಾವತಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಪಾನ್ ಡೀಟೇಲ್ಸ್ ನಲ್ಲಿ ಟಿಡಿಎಸ್ ಬಗ್ಗೆ ಪರಿಶೀಲನೆ ಮಾಡಿದರೆ ಈ ಬಗ್ಗೆ ಗೊತ್ತಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ಅಥವಾ ವಾದಿಯ ಆಡಿಟರ್ ಬಳಿ ಟಿಡಿಎಸ್ ವಿಚಾರವನ್ನು ನಾನು ಕೇಳಿಲ್ಲ.

2.ದಿನಾಂಕ 1-4-22ರಿಂದ ಮಧ್ಯಸ್ಥಿಕೆ ಕೇಂದ್ರಕ್ಕೆ ನಾವು ಅರ್ಜಿ ಸಲ್ಲಿಸುವವರೆಗೆ ಪ್ರತಿವಾದಿಯು 25,33,55,443ರೂಪಾಯಿಗಳನ್ನು ವಾದಿಯ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿ. ಸಾಗಾಣಿಕಾ ವೆಚ್ಚ 40,77,500ರೂಪಾಯಿಗಳನ್ನು ನಮಗೆ ಕಡಿತಗೊಳಿಸಿದ್ದಾರೆ ಎಂದರೆ ಸಾಕ್ಷಿಯು ಆ ಹಣವನ್ನು ಅವರೇ ಕಟ್ಟಬೇಕು ಎನ್ನುತ್ತಾರೆ. ಚೀಲ, ಟಿ ಡಿಎಸ್ ಮತ್ತು ಸಾಗಾಣಿಕಾ ವೆಚ್ಚವನ್ನು ಪ್ರತಿವಾದಿಯೇ ಕಟ್ಟಬೇಕು ಎನ್ನುವ ಬಗ್ಗೆ ನಮ್ಮಲ್ಲಿ ಯಾವುದೇ ಕರಾರು ಆಗಿದೆಯೇ ಎಂದರೆ ಸಾಕ್ಷಿಯು ಆ ರೀತಿ ಯಾರೂ ಮಾಡಿಸಲ್ಲ ಎನ್ನುತ್ತಾರೆ. ಅವರು ನಮಗೆ ಕೊಬ್ಬರಿಯನ್ನು ಸರಬರಾಜು ಮಾಡುವ ಬಗ್ಗೆ ಸಲ್ಲಿಸಿದ ಮನವಿ ಅಥವಾ ಅದನ್ನು ನಾವು ಒಪ್ಪಿಕೊಂಡ ಬಗ್ಗೆ ಯಾವುದಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಆ ರೀತಿ ಯಾವುದೇ ದಾಖಲೆ ಇಲ್ಲ ಎನ್ನುತ್ತಾರೆ. ಪ್ರತಿವಾದಿಯರು ನಮಗೆ ಇವತ್ತಿಗೂ ಕೊಡಬೇಕಾಗಿರುವ ಹಣ 31,713ರೂಪಾಯಿ ಎಂದರೆ ಸರಿಯಲ್ಲ. ದಾವೆಯಲ್ಲಿ ಪ್ರತಿವಾದಿಯಿಂದ ಬರಬೇಕಾಗಿದೆ ಎಂದು ಕಾಣಿಸಿದ ಹಣ ಕಾಲ್ಪನಿಕವಾಗಿ ಲೆಕ್ಕಹಾಕಲಾದ ಹಣ ಎಂದರೆ ಸರಿಯಲ್ಲ. ನನ್ನ ಮತ್ತು ಅವ ರ ನಡುವೆ ಖರೀದಿಗಿಂತ

ಮೊದಲು ಆದ ಷರತ್ತುಗಳನ್ನು ಮುಚ್ಚಿಟ್ಟು ಈ ದಾವೆ ತಂದಿರುವುದು ಎಂದರೆ ಸರಿಯಲ್ಲ. ಎಲ್ಲಾ ಹಣ ಬಂದಿದ್ದು ಕೇವಲ 31,713 ಹಣ ಕೇವಲ ಪ್ರತಿವಾದಿಯರಿಂದ ಬರಬೇಕಾಗಿದ್ದರೂ ಕೂಡ ಹೆಚ್ಚಿನ ಹಣ ಬರಬೇಕೆಂದು ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಕ್ರಮ ಲಾಭ ಹೊಂದುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇವೆಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**